1) ಜಿಲ್ಲಾ ನೆಹರೂ ರೋಜ್‌ಗಾರ್ ಯೋಜನೆ ಸಮಿತಿಯ ಮಂಜೂರಾತಿಯಂತೆ ಹಾಸನ ನಗರ ಸಭೆಯಿಂದ ಕಾಮಗಾರಿ ಕೆಲಸಗಳನ್ನು ನಿಯಮಾನುಸಾರ ನಿರ್ವಹಿಸಲಾಗಿದೆ. ಈ ಬಗ್ಗೆ ಯಾವುದೇ ದೂರು ಬಂದಿರುವುದಿಲ್ಲ.

ಕುಂದಾಪುರಕ್ಕೆ ಅಗ್ನಿಶಾಮಕ ದಳ.

409 (781) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರದ ಸಾರ್ವಜನಿಕ ಬಹುಕಾಲದ ಬೇಡಿಕೆಯಾದ ಅಗ್ನಿಶಾಮಕ ದಳವು ಸರ್ಕಾರದಿಂದ ಮಂಜೂರಾತಿ ದೊರೆತಿದ್ದರೂ ಅಗ್ನಿಶಾಮಕ ದಳವನ್ನು ಈ ತನಕ ಇಲ್ಲಿಗೆ ಒದಗಿಸದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಸೌಲಭ್ಯ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು):-

ಅ) ಹೌದು.

ಆ) 1991-92ನೇ ಆರ್ಥಿಕ ಸಾಲಿನಲ್ಲಿ ಕುಂದಾಪುರದಲ್ಲಿ ಅಗ್ನಿಶಾಮಕ ಠಾಣೆಯನ್ನು ಪ್ರಾರಂಭಿಸಲು ಸರ್ಕಾರ ಈಗಾಗಲೇ ಮಂಜೂರಾತಿ ನೀಡಲಾಗಿದೆ. ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸಲು ಮುಂದಿನ ಅಗತ್ಯ ಕ್ರಮವನ್ನು ಕೈಗೊಳ್ಳಲಾಗುತ್ತಿದೆ.

ಅಧ್ಯಕ್ಷರು:- ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ 6ನೇ ಪಟ್ಟಿಯಲ್ಲಿನ ಪ್ರಶ್ನೆಗಳಿಗೆ ಉತ್ತರವನ್ನು ಸಭೆಯ ಮುಂದೆ ಮಂಡಿಸಲಾಯಿತು.

ಜನ್ಮ ದಿನದ ಶುಭಾಶಯಗಳು

ಈ ದಿವಸ ನಮ್ಮ ಮಾನ್ಯ ಸದಸ್ಯರಾದ ಶ್ರೀರಂಗದೇವರಾಯಲು ಅವರ ಜನ್ಮ ದಿನ. ಈ ಸದನದ ಎಲ್ಲಾ ಸದಸ್ಯರುಗಳ ಪರವಾಗಿ ನಾನು ಶ್ರೀರಂಗದೇವರಾಯಲು ಅವರಿಗೆ ಹಾರ್ದಿಕ ಶುಭಾಶಯಗಳು ಸಲ್ಲಿಸುತ್ತೇನೆ. ನಿಮಗೆ ಬಜೆಟ್ ಮುನ್ನ ಶುಭಾಶಯಗಳನ್ನು ನಾವೆಲ್ಲರೂ ಅರ್ಪಿಸುತ್ತಾ ಇದ್ದೇವೆ.

ಡಿಮ್ಯಾಂಡ್‌ಗಳ ಬಗ್ಗೆ ಪೂರ್ಣ ಚರ್ಚೆಗೆ ಮನವಿ

ಶ್ರೀ ಕೆ.ಹೆಚ್. ರಂಗನಾಥ (ಹಿರಿಯೂರು):- ಮಾನ್ಯ ಅಧ್ಯಕ್ಷರೇ, ಬಿಎಸಿ ರಿಪೋರ್ಟ್ ಸದನದ ಮುಂದೆ ಇಟ್ಟು ಅದು ಒಪ್ಪಿಗೆಯನ್ನು ಪಡೆದ ಹಾಗೆ ಕಾಣುತ್ತದೆ. ಸಾಮಾನ್ಯವಾಗಿ ಈ ರಿಪೋರ್ಟನ್ನು ಸೆಕ್ರೆಟರಿಯನ್ನು ಓದುತ್ತಾರೆ, ನಾವೆಲ್ಲರೂ ಸುಮ್ಮನೆ ಇರುತ್ತೇವೆ. ಇದಕ್ಕೆ ಸಾಮಾನ್ಯವಾಗಿ ಒಪ್ಪಿಗೆ ಇದ್ದ ಹಾಗೆ ಆಗುತ್ತದೆ. ನಾನು ಕೂಡ ಆವೊತ್ತು ಗಮನಿಸಿರಲಿಲ್ಲ. ಈ ಬಗ್ಗೆ ತಾವು ನನ್ನನ್ನು ಕ್ಷಮಿಸಬೇಕು. ಆ ಒಂದು ತಪ್ಪು ನನ್ನಿಂದ ಆಗಿದೆ. ಆ ರಿಪೋರ್ಟಿನಲ್ಲಿ ಮೂರನೇ ತಾರೀಖಿನಂದು ಬಜೆಟ್ ಮಂಡನೆ ಮಾಡುತ್ತಾರೆ, 30ನೇ ತಾರೀಖಿಗೆ ಅಪ್ರೋಪ್ರಿಯೇಷನ್ ಬಿಲ್ ಪಾಸ್ ಆಗಲೇಬೇಕೆಂದು ನಮೂದು ಆಗಿದೆ. ಒಟ್ಟು ಎಲ್ಲಾ ಇಲಾಖೆಗಳು ಸೇರಿ 10-11 ದಿನಗಳು ಡಿಮ್ಯಾಂಡ್ ಮೇಲಿನ ಚರ್ಚೆಗೆ ಸಿಗುತ್ತವೆ. ಇದನ್ನು ಮಾನ್ಯ ಬಿಎಸಿ ಸದಸ್ಯರು ಗಮನಿಸಿದ್ದಾರೋ ಇಲ್ಲವೋ ಎನ್ನುವುದು ನನಗೆ ಗೊತ್ತಿಲ್ಲ. ಹೋದ ಸಾರಿ ಕೂಡ ಇದೇ ರೀತಿಯಲ್ಲಿ ಬಹಳ ಡಿಮ್ಯಾಂಡ್‌ಗಳು ಪಾಸ್ ಆದುದು ತಮಗೆ ಕೂಡ ಗೊತ್ತಿರಬಹುದು. ಸಮಯಾಭಾವದಿಂದ ಗಿಲೆಟಿನ್ ಹಾಕುವ ಹಾಗೆ ಆಯಿತು. ಆದರೆ ಪ್ರತಿ ಸಾರಿಯೂ ಗಿಲೆಟಿನ್ ಹಾಕತಕ್ಕಂಥ ಪರಿಸ್ಥಿತಿ ನಮ್ಮಲ್ಲಿ ಇಲ್ಲ. ಹಿಂದೆ ಸಭಾಧ್ಯಕ್ಷರಾಗಿ ಮಾನ್ಯಶ್ರೀ ಬಾಳಿಗಾರವರು ಇದ್ದಾಗ ಹೀಗೆ ಆಗಿರಬಹುದು ಎಂಬ ನೆನಪು ನನಗಿದೆ. ಹೋಬಸಾರಿ ನಮ್ಮಲ್ಲಿ ಹೀಗೆ ಗಿಲೆಟಿನ್ ಹಾಕಿದಾಗ ಎಲ್ಲಾ ಪತ್ರಿಕೆಗಳವರು ಅಗ್ರಲೇಖನ ಪ್ರಕಟಿಸಿದವು. ಇದು ಸರಿಯಲ್ಲ, ಎಷ್ಟೋ ಡಿಮ್ಯಾಂಡ್‌ಗಳು ಚರ್ಚೆ ಇಲ್ಲದೇ ಹೋಗುತ್ತವೆ, ರಾಜ್ಯದ ಬಜೆಟ್‌ನ್ನು ಸೂಕ್ತ ರೀತಿಯಲ್ಲಿ ಚರ್ಚೆ ಮಾಡದೇ ಆಡಳಿತ ಕ್ರಮವನ್ನು ವಿಧಾನ ಸಭಾ ಸದಸ್ಯರು ಹಕ್ಕನ್ನು ಮೊಟಕು ಮಾಡಿಕೊಂಡಿದ್ದಾರೆ - ಮುಂತಾಗಿ ಲೇಖನದಲ್ಲಿ ವಿಷದೀಕರಿಸಿದ್ದರು. ತಮ್ಮ ಅಭಿಪ್ರಾಯವೂ ಕೂಡ ಈ ಕುರಿತು

ಇರಬಹುದು. ತಮಗೂ ಕೂಡ ಅನಿವಾರ್ಯತೆ ಇರಬಹುದು, ಸಭೆಯು ಒಂದು ತೀರ್ಮಾನವನ್ನು ತೆಗೆದುಕೊಂಡಾಗ ತಮಗೂ ಏನು ಮಾಡುವುದಕ್ಕಾಗುವುದಿಲ್ಲ. ಈ ಬಗ್ಗೆ ಒಂದು ವೇಳೆ ಸಭೆಯ ಒಪ್ಪಿಗೆ ಆಗಿದ್ದರೂ ಕೂಡ ಇದನ್ನು ಪುನರ್‌ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅದಕ್ಕೆ ತಾವು ಅವಕಾಶ ಮಾಡಿಕೋಡಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆಯೇ ಮಾನ್ಯ ಸದಸ್ಯರೆಲ್ಲರೂ ಬಹುಮಟ್ಟಿಗೆ ನನ್ನ ನೂತನ್ನು ಒಪ್ಪುತ್ತಾರೆ ಎಂಬದು ನನ್ನ ನಂಬಿಕೆಯಾಗಿದೆ.

ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ):- ಮಾನ್ಯ ಅಧ್ಯಕ್ಷರೇ, ಮಾನ್ಯ ಹಿರಿಯ ಸದಸ್ಯರಾದ ಶ್ರೀ ಕೆ.ಹೆಚ್. ರಂಗನಾಥರವರ ಅಭಿಪ್ರಾಯಕ್ಕೆ ನಾನು ಸಂಪೂರ್ಣವಾಗಿ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಕಳೆದ ಸಾರಿ ನಾವುಗಳು ನೋಡಿದ್ದೇವೆ, ಬಹುಶಃ ಅಗ್ರಿಕಲ್ಚರ್ ಮತ್ತು ಹೆಚ್‌ಯುಡಿ ಬಿಟ್ಟರೆ ಉಳಿದೆಲ್ಲಾ ಡಿಮ್ಯಾಂಡ್‌ಗಳು ಗಿಲೆಟಿನ್ ಆದುವು. ಮಾನ್ಯ ಸದಸ್ಯರಿಗೆ ಇಂಥ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಲು ಒಂದು ಅವಕಾಶ ಇರುತ್ತದೆ. ಯಾವುದೇ ಇಲಾಖಾ ಕಾರ್ಯಗಳ ಮೇಲೆ ಟೀಕೆ ಟಿಪ್ಪಣಿಗಳನ್ನು ಮಾಡುವುದಕ್ಕೆ ಹಾಗೂ ಸಲಹೆಗಳನ್ನು ಕೊಡುವುದಕ್ಕೆ ಇದೊಂದು ಅವಕಾಶ. ಈ ಅವಕಾಶವು ನಮಗೆ ಸಿಕ್ಕಿಲ್ಲವೆಂದರೆ ನಮ್ಮ ಕಷ್ಟಗಳನ್ನು ಸರಕಾರದವರಲ್ಲಿ ನಿವೇದನೆ ಮಾಡಿಕೊಳ್ಳುವುದಾದರೂ ಹೇಗೆ? ಬಿಎಸಿ ತೀರ್ಮಾನದಂತೆ ಸ್ಯಾಟರ್‌ಡೇ ಕೂಡ ಸೆಶನ್ ನಡೆಸಬೇಕೆಂದು ಆಗಿದೆ. ಆದರೂ ಕೂಡ ನಮಗೆ 10-16 ದಿನಗಳು ಮ್ಯಾಗ್ನಿಮಮ್ ಸಿಗಬಹುದು. ನಮಗೆ ಯಾವುದೇ ವಿಚಾರದಲ್ಲಿ ಬೆಳಕನ್ನು ಚೆಲ್ಲಬೇಕಾದರೆ ಇಷ್ಟು ದಿನಗಳಲ್ಲಿ ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ವಿಚಾರದ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕು. ಇವೊತ್ತು ಪತ್ರಿಕೆಗಳಲ್ಲಿಯೂ ತಾವು ನೋಡಿರಬಹುದು. ಜನರು ಮತ್ತು ಇಂಟಲೆಕ್ಚುವಲ್ಸ್‌ನಿಂದ ನಾವು ಇಂದು ಟೀಕೆಗೆ ಗುರಿಯಾಗಿದ್ದೇವೆ. ಇಲಿ ಶಾಸಕರು ಏನೂ ಮಾಡುವುದಿಲ್ಲ, ಬೇರೆ ಏನೋ ಮಾಡುತ್ತಾ ಇದ್ದಾರೆಂಬ ಬಗ್ಗೆ ಸಾಕಷ್ಟು ಟೀಕೆ ಟಿಪ್ಪಣಿಗಳು ಬರುತ್ತಾ ಇವೆ. ಆದ್ದರಿಂದ ಇಂಥ ಸಂದರ್ಭದಲ್ಲಿ ಮಾತನಾಡಲು ಹೆಚ್ಚು ಅವಕಾಶ ಇರಬೇಕಾಗುತ್ತದೆ. ಆ ಕಾರಣಕ್ಕಾಗಿ ಪ್ರತಿಯೊಂದು ಡಿಮ್ಯಾಂಡ್‌ನ ಮೇಲೆಯೂ ಸವಿವರ ಚರ್ಚೆಗೆ ಅವಕಾಶ ಮಾಡಿಕೊಟ್ಟು ಸಾಕಷ್ಟು ಸಮಯಾವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಪ್ರೊ: ಎಮ್.ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ):- ಶ್ರೀ ರಂಗನಾಥರವರು ಪ್ರಾರಂಭ ಮಾಡಿರುವಂತಹ ವಿಷಯದ ಬಗ್ಗೆ ನಾನು ಈ ಹಿಂದೆ ಆಕ್ಷೇಪಣೆ ಮಾಡಿದ್ದೆ. ನನಗೆ ಗೊತ್ತಿರುವ ಪ್ರಕಾರ, ನಾವು ಹೌಸ್ ಆಫ್ ಕಾಮನ್ಸ್ ಸಂಪ್ರದಾಯಗಳನ್ನು ಹೆಚ್ಚೂ ಕಡಿಮೆ ಪಾಲಿಸುತ್ತಾ ಬಂದಿದ್ದೇವೆ ಎಂದು ನಾನು ತಿಳಿದುಕೊಂಡಿದ್ದೇನೆ. ಹೌಸ್ ಆಫ್ ಕಾಮನ್ಸ್ ಸಂಪ್ರದಾಯದ ಪ್ರಕಾರ ಒಂದು ದಿವಸಕ್ಕೆ ಬಜೆಟ್ ಅಧಿವೇಶನದಲ್ಲಿ ಒಬ್ಬ ಮಂತ್ರಿಯ ಎರಡು ಇಲಾಖೆಗಳಿಗಿಂತ ಹೆಚ್ಚಿಗೆ ಚರ್ಚೆ ಮಾಡಬಾರದು ಎಂದು ಇದೆ. ಇಲ್ಲಿ ನಾವು ಕನಿಷ್ಟ ಒಂದು ದಿವಸಕ್ಕೆ ಒಂದು ಮಂತ್ರಿಯ ಖಾತೆಗಳನ್ನು ಚರ್ಚೆ ಮಾಡುವಂಥ ಕನಿಷ್ಟ ಕಾರ್ಯಕ್ರಮವನ್ನಾದರೂ ಹಾಕಿಕೊಳ್ಳಬೇಕು. ಆ ಕಾರಣ ನಾನು ಸಲಹೆ ಮಾಡಿದ್ದು. ಕಳೆದ ಬಜೆಟ್ ಅಧಿವೇಶನದ ತರಹವೇ ಈ ಅಧಿವೇಶನ ಆಗಬಾರದು. ಸ್ವಲ್ಪ ನಾವು ಅರ್ಥಪೂರ್ಣವಾಗಿ ನಮ್ಮ ರಾಜ್ಯದ ವ್ಯವಹಾರಗಳನ್ನು ಚರ್ಚೆ ಮಾಡುವುದು ಅವಶ್ಯಕ. ಆ ಕಾರಣ, ಏಪ್ರಿಲ್ ತಿಂಗಳಿಗೆ ಮಾತ್ರ ವೋಟ್ ಆನ್ ಅಕೌಂಟ್ ಅನ್ನು ತೆಗೆದುಕೊಂಡು ಬಜೆಟ್ ಅಧಿವೇಶನಕ್ಕೆ ವಿವರವಾದ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಸಭಾಧ್ಯಕ್ಷರ ಮೂಲಕ ಮಾನ್ಯ ಸಭಾನಾಯಕರಿಗೆ ನಾನು ಸಲಹೆ ಮಾಡುತ್ತೇನೆ.

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ):- ಹಿರಿಯ ಸದಸ್ಯರಾದ ಮಾನ್ಯ ರಂಗನಾಥನವರು ಹೇಳಿದ ವಿಚಾರದಲ್ಲಿ ನಮಗೂ ಕೂಡ ಒಪ್ಪಿಗೆ ಇದೆ. ಏಕೆಂದರೆ, ಬಹಳ ಪ್ರಮುಖವಾಗಿ ಡಿಮ್ಯಾಂಡ್‌ಗಳ ಬಗ್ಗೆ ಚರ್ಚೆ ಆಗದೇ ಇಲ್ಲಿ ಪಾಸ್ ಆಗತಕ್ಕದ್ದು ಈ ಪ್ರಜಾಪ್ರಭುತ್ವದ ರೀತಿಯಲ್ಲಿ ಅಷ್ಟೊಂದು ಸಮಂಜಸವಲ್ಲ. ಪ್ರೊ. ನಂಜುಂಡಸ್ವಾಮಿಯವರು ಹೇಳಿದ ಹಾಗೆ ಏಪ್ರಿಲ್ ತಿಂಗಳಿಗೆ ವೋಟ್ ಆನ್ ಅಕೌಂಟ್ ಅನ್ನು ತೆಗೆದುಕೊಂಡು ನಂತರ ವಿವರಣೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು ಎಂದು ಕೇಳುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಮಾನ್ಯ ಸಭಾಧ್ಯಕ್ಷರೆ.....

ಅಧ್ಯಕ್ಷರು:- ಶ್ರೀ ಬನ್ನಿಕೋಡ್‌ರವರೇ, ನಿಮ್ಮ ರೆಪ್ರೆಸೆಂಟಿಟೀವ್, ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇದ್ದಾರೆ. I can understand. ರೈತಸಂಘದ ಸ್ನೇಹಿತರು ಈ ಬಗ್ಗೆ ಮಾತನಾಡಬೇಕು, ಎಂದು ಕೇಳಿದರೆ ಅವರಿಗೆ ಅವಕಾಶ ಕೊಡಬಹುದು. ಏಕೆಂದರೆ, ಅವರ ರೆಪ್ರೆಸೆಂಟಿಟೀವ್‌ರವರು ಆ ಸಭೆಗೆ ಬಂದಿರಲಿಲ್ಲ. ಇದರ ಬಗ್ಗೆ ಈ ಸದನದ ನಾನಾ ಭಾಗಗಳಿಂದ ಬಂದಿರತಕ್ಕ ವಿಚಾರಗಳು ಇವೆ.

ಮೊದಲು ಬಜೆಟ್ ಮಂಡನೆ ಆಗಲಿ, ನಂತರ ಎಲ್ಲಾ ಪಕ್ಷಗಳ ಮುಖಂಡರುಗಳನ್ನು ಕರೆದು ತೀರ್ಮಾನ ಮಾಡೋಣ. ಈಗ ಈ ಸಭೆ ಮುಂದುವರೆದು ಮತ್ತೆ 2 ಗಂಟೆಗೆ ಸೇರುತ್ತದೆ.